ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಕಬಿನಿ ಏತ ನೀರಾವರಿ ಯೋಜನೆಯ ಸರ್ವೆ ಕಾರ್ಯ ಸಿಬ್ಬಂದಿ ಕೊರತೆಯಿಂದ 2001-02ರಲ್ಲಿ ತೆಗೆದುಕೊಳ್ಳಲಾಗಿಲ್ಲ. 2002-03ನೇ ಸಾಲಿನಲ್ಲಿ ಈ ಸರ್ವೆ ಕೆಲಸಕ್ಕೆ ರೂ. 20.00 ಲಕ್ಷಗಳ ಅನುದಾನವಿದೆ. ಸರ್ವೆ ಕಾರ್ಯವನ್ನು ಶೀಘ್ರವಾಗಿ ಮುಗಿಸಲು ಖಾಸಗಿ ಸಂಸ್ಥೆಯಿಂದ ತೆಗೆದುಕೊಳ್ಳಲು ಅನುಮತಿ ನೀಡಲಾಗಿದ್ದು ಈ ಕೆಲಸಕ್ಕೆ ಟೆಂಡರ್ ಕರೆದು ಏಪ್ರಿಲ್ 2002ರಲ್ಲಿ ಕಡಿಮೆ ದರ ಸೂಚಿಸಿದ ಖಾಸಗಿ ಸಂಸ್ಥೆಯಾದ ಮೆ|| ಅಮೀನ್ ಬಾವಿ ಹೆಗ್ಡೆ ರವರಿಗೆ ವಹಿಸಲಾಗಿದೆ. ಬಿದರಹಳ್ಳಿ ಏತ ನೀರಾವರಿಯ ರೈಸಿಂಗ್ ಮೈನ್ ಮತ್ತು ಮುಖ್ಯ ಕಾಲುವೆಯ 5 ಕಿ.ಮೀ. ಸರ್ವೆ ಕಾರ್ಯ ಮುಗಿದಿದ್ದು ಅಂತರಸಂತೆ ಏತ ನೀರಾವರಿಯ ರೈಸಿಂಗ್ ಮೈನ್ ಮತ್ತು ಕಾಲುವೆಯ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಸೆಪ್ಟೆಂಬರ್ 2002ರೊಳಗೆ ಸರ್ವೆ ಕೆಲಸ ಪೂರ್ಣಗೊಳಿಸಲಾಗುವುದು.

ಆ) ಹೊಂಗನೂರು, ಹಿರೇಕೆರೆ ಯೋಜನೆಗೆ ರೂ. 240.00 ಲಕ್ಷಗಳ ಮೊತ್ತಕ್ಕೆ ದಿನಾಂಕ : 15-03-99ರಲ್ಲಿ ಅನುಮೋದನೆ ಕೊಟ್ಟಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಕರೆದು ಗುತ್ತಿಗೆದಾರರಿಗೆ ದಿನಾಂಕ : 03-07-2002 ರಂದು ವಹಿಸಲಾಗಿದೆ. ಕಾಮಗಾರಿ ಪ್ರಾರಂಭಿಕ ಹಂತದಲ್ಲಿರುವುದರಿಂದ ಯಾವುದೇ ಹಣ ಬಿಡುಗಡೆ ಆಗಿರುವುದಿಲ್ಲ. 2002-03 ರ ಸಾಲಿನಲ್ಲಿ ಈ ಯೋಜನೆಗೆ ರೂ. 30.00 ಲಕ್ಷಗಳ ಅನುದಾನವಿದೆ. ಈ ಯೋಜನೆಯನ್ನು ಇನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂಗೊಳಿಸುವ ವಿಚಾರ

198 (1684) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು ?

2) ಇದರಲ್ಲಿ ಬಿಜಾಪುರ ಜಿಲ್ಲೆಯ ಕಾರ್ಯಕರ್ತೆಯರ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರ ಒದಗಿಸುವುದು.

3) ಇವರುಗಳೆಲ್ಲಾ ಎಷ್ಟು ವರ್ಷಗಳಿಂದ ಸೇವೆಸಲ್ಲಿಸುತ್ತಿದ್ದಾರೆ. ಅವರಿಗೆ ಸರ್ಕಾರ ನೀಡುತ್ತಿರುವ ಗೌರವಧನ ಎಷ್ಟು ?

4) ಈ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ? ಎಂದು ಹೆಚ್ಚಿಸಲಾಗುವುದು ?

5) ಗೌರವಧನ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಇವರುಗಳನ್ನು ಸರ್ಕಾರ ಖಾಯಂಗೊಳಿಸಲು ಏಕೆ ನಿರ್ಧರಿಸಿಲ್ಲ ?

6) ರಾಜ್ಯ ಸರ್ಕಾರದ ನೌಕರರಂತೆ ಇವರನ್ನು ಪರಿಗಣಿಸಿ ನೌಕರರ ಸ್ಥಾನಮಾನ, ವೇತನವನ್ನು ಎಂದು ನೀಡಲಾಗುತ್ತದೆ ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

1) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ 39992

2) 1297 ಅಂಗನವಾಡಿ ಕಾರ್ಯಕರ್ತೆಯರು ವಿಜಾಪುರ ಜಿಲ್ಲೆಯಲ್ಲಿರುತ್ತಾರೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

1) ಬಸವನಬಾಗೇವಾಡಿ	265	2) ಬಿಜಾಪುರ	283
3) ಇಂಡಿ	268	4) ಮುದ್ದೇಬಿಹಾಳ್	238
5) ಸಿಂಧಗಿ	243		

3) ಇವರುಗಳೆಲ್ಲಾ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ಎಂಬ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

ಬಸವನಬಾಗೇವಾಡಿ	8 ವರ್ಷ
ಬಿಜಾಪುರ	11
ಇಂಡಿ	19
ಮುದ್ದೇಬಿಹಾಳ್	13
ಸಿಂಧಗಿ	21

ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡುತ್ತಿರುವ ಗೌರವಧನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

4) ಗೌರವಧನ ಹೆಚ್ಚಿಸುವ ಪ್ರಸ್ತಾಪ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಕೇಂದ್ರ ಸರ್ಕಾರದಿಂದ ಅನುಮತಿ ಬಂದ ನಂತರ ಹೆಚ್ಚಿಸಲಾಗುವುದು.

5) ಐಸಿಡಿಎಸ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಖಾಯಂಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದಲ್ಲಿ ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ. ಇವರನ್ನು ಖಾಯಂಗೊಳಿಸುವ ಬಗ್ಗೆ ಪ್ರಕರಣವು ಸುಪ್ರೀಂ ಕೋರ್ಟಿನ ಮುಂದೆ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ.

6) ಈ ಬಗ್ಗೆ ಕೇಂದ್ರ ಸರ್ಕಾರದಿಂದ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1684 ಕ್ಕೆ ಅನುಬಂಧ

ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡುತ್ತಿರುವ ಗೌರವ ಧನದ ವಿವರ ಈ ಕೆಳಗಿನಂತಿರುತ್ತದೆ.

ಕ್ರ.ಸಂ.	ವಿದ್ಯಾರ್ಹತೆಯ ವಿವರ	ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ
1.	ಎಸ್.ಎಸ್.ಎಲ್.ಸಿ. ಫೇಲ್	438	250
2.	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷ ಸೇವೆ ಸಲ್ಲಿಸಿದವರಿಗೆ	469	250
3.	ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷ ಸೇವೆ ಸಲ್ಲಿಸಿದವರಿಗೆ	500	250
4.	ಎಸ್.ಎಸ್.ಎಲ್.ಸಿ. ಪಾಸ್	500	250
5.	ಎಸ್.ಎಸ್.ಎಲ್.ಸಿ. ಪಾಸ್ ಜೊತೆಗೆ 5 ವರ್ಷ ಸೇವೆ ಸಲ್ಲಿಸಿದವರಿಗೆ	531	250
6.	ಎಸ್.ಎಸ್.ಎಲ್.ಸಿ. ಪಾಸ್ ಜೊತೆಗೆ 10 ವರ್ಷ ಸೇವೆ ಸಲ್ಲಿಸಿದವರಿಗೆ	565	250
7.	ಅಂಗನವಾಡಿ ಸಹಾಯಕಿಯರು	260	125